# ಕರ್ನಾಟಕ ಸರ್ಕಾರ

ರಾಜ್ಯ ಯೋಜನಾ ನಿರ್ದೇಶಕರು, ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಾ ಅಭಿಯಾನ
ಹೊಸ ಸಾರ್ವಜನಿಕ ಕಛೇರಿಗಳ ಕಟ್ಟಡ, ನೃಪತುಂಗ ರಸ್ತೆ, ಬೆಂಗಳೂರು-001

ಸಂ:ರಾಮಾಶಿಅ/ವಾಹನ.ಟೆಂ.2011/19/11-12 ದಿನಾಂಕ: 15-07-2011

2011-12ರ ಅವಧಿಯಲ್ಲಿ ರಾಜ್ಯ ಕಛೇರಿಯ ಅಧಿಕಾರಿಗಳಿಗೆ ವಾಹನ ಸೌಕರ್ಯ ಒದಗಿಸುವ ಸಂಬಂಧ ಕಾರುಗಳನ್ನು ಸರಬರಾಜು ಮಾಡುವ ಸಲುವಾಗಿ ಅಧಿಕೃತ ಟ್ರಾವಲ್ಸ್‌ರವರಿಂದ ದರಪಟ್ಟಿ ಆಹ್ವಾನ

ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ - ಕರ್ನಾಟಕ
1 5 JUL 2011
ನೃಪತುಂಗ ರಸ್ತೆ,
ಬೆಂಗಳೂರು - 01

ದೂರವಾಣಿ ಸಂಖ್ಯೆಗಳು : 22113773, 222113770

ರಾಜ್ಯ ಯೋಜನಾ ನಿರ್ದೇಶಕರ ಕಛೇರಿ, ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಾ ಅಭಿಯಾನ,
ಹೊಸ ಸಾರ್ವಜನಿಕ ಕಛೇರಿಗಳ ಆವರಣ, ಕೆ.ಆರ್.ವೃತ್ತ, ನೃಪತುಂಗ ರಸ್ತೆ, ಬೆಂಗಳೂರು

ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ - ಕರ್ನಾಟಕ
15 JUL 2011
ನೃಪತುಂಗ ರಸ್ತೆ, ಬೆಂಗಳೂರು - 01

ಸಂ ರಾಮಾಶಿಅ/ವಾಹನ.ಟೆಂ.2011/19/11-12 ದಿನಾಂಕ: 15-07-2011

## ಮಾಸಿಕ ಬಾಡಿಗೆ ಆಧಾರದಲ್ಲಿ ವಾಹನಗಳ ಸರಬರಾಜಿಗಾಗಿ ದರಪಟ್ಟಿ ಪ್ರಕಟಣೆ.

ರಾಜ್ಯ ಕಛೇರಿಯ ಅಧಿಕಾರಿಗಳಿಗೆ ವಾಹನ ಸೌಕರ್ಯ ಒದಗಿಸುವ ಸಂಬಂಧ ಹೊರ ಗುತ್ತಿಗೆ ಆಧಾರದ ಮೇಲೆ ಮಾಸಿಕ ಬಾಡಿಗೆ ದರದಲ್ಲಿ ಅಗತ್ಯಕ್ಕೆ ತಕ್ಕಂತೆ ವಾಹನಗಳನ್ನು ಪಡೆಯುವ ಸಂಬಂಧ ಕಾರುಗಳನ್ನು ಹೊಂದಿರುವ ಅಧಿಕೃತ ಟ್ರಾವಲ್ಸ್‌ರವರುಗಳಿಂದ ದರಪಟ್ಟಿಗಳನ್ನು ಆಹ್ವಾನಿಸಲಾಗಿದೆ. ಆಸಕ್ತ ಟ್ರಾವಲ್ಸ್‌ರವರು ರಾಜ್ಯ ಯೋಜನಾ ನಿರ್ದೇಶಕರು, ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಾ ಅಭಿಯಾನ, ಬೆಂಗಳೂರು ಈ ಕಛೇರಿಯ ವೆಬ್ ಸೈಟ್ **www.schooleducation.kar.nic.in** ಮತ್ತು **www.ssakarnataka.gov.in** ರಿಂದ ದರಪಟ್ಟಿ ಅರ್ಜಿ ನಮೂನೆ ಮತ್ತು ವಿವರಗಳನ್ನು ದಿನಾಂಕ **18.07.2011** ರಿಂದ **30.07.2011** ರ ಸಂಜೆ **2.00** ಗಂಟೆಯೊಳಗಾಗಿ ಪಡೆಯಬಹುದು. ಭರ್ತಿಮಾಡಿ ಮೊಹರು ಮಾಡಿದ ದರಪಟ್ಟಿ ಲಕೋಟೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ **30.07.2011** ಸಂಜೆ 3.00 ಗಂಟೆಯವರೆಗೆ. ಭದ್ರತಾ ಠೇವಣಿ (ಇ.ಎಂ.ಡಿ) ಹಣ ರೂ: 25,000/- ಹೆಚ್ಚಿನ ವಿವರಗಳನ್ನು ಕಛೇರಿಯ ಕೆಲಸದ ವೇಳೆಯಲ್ಲಿ ಖುದ್ದಾಗಿ ಪಡೆಯಬಹುದು. ದರಪಟ್ಟಿಯ ಅಂದಾಜು ಮೌಲ್ಯ ರೂ. 12 ಲಕ್ಷಗಳು.

ನಿರ್ದೇಶಕರು
ಆರ್.ಎಂ.ಎಸ್.ಎ

# ಕರ್ನಾಟಕ ಸರ್ಕಾರ

ರಾಜ್ಯ ಯೋಜನಾ ನಿರ್ದೇಶಕರು, ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಾ ಅಭಿಯಾನ
ಹೊಸ ಸಾರ್ವಜನಿಕ ಕಛೇರಿಗಳ ಕಟ್ಟಡ, ನೃಪತುಂಗ ರಸ್ತೆ, ಬೆಂಗಳೂರು-001

ಸಂ:ರಾಮಾಶಿಅ/ವಾಹನ.ಟೆಂ.2011/19/11-12 ದಿನಾಂಕ: 05-07-2011

## 2011-12ರ ಅವಧಿಯಲ್ಲಿ ರಾಜ್ಯ ಕಛೇರಿಯ ಅಧಿಕಾರಿಗಳಿಗೆ ವಾಹನ ಸೌಕರ್ಯ ಒದಗಿಸುವ ಸಂಬಂಧ ಕಾರುಗಳನ್ನು ಸರಬರಾಜು ಮಾಡುವ ಸಲುವಾಗಿ ಅಧಿಕೃತ ಟ್ರಾವಲ್ಸ್‌ರವರಿಂದ ದರಪಟ್ಟಿ ಆಹ್ವಾನ

ದೂರವಾಣಿ ಸಂಖ್ಯೆಗಳು : 22113773, 222113770

**ರಾಜ್ಯ ಯೋಜನಾ ನಿರ್ದೇಶಕರ ಕಛೇರಿ, ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಾ ಅಭಿಯಾನ,**
**ಹೊಸ ಸಾರ್ವಜನಿಕ ಕಛೇರಿಗಳ ಆವರಣ, ಕೆ.ಆರ್.ವೃತ್ತ, ನೃಪತುಂಗ ರಸ್ತೆ, ಬೆಂಗಳೂರು**

ಸಂ ರಾಮಾಶಿಅ/ವಾಹನ.ಟೆಂ.2011/19/11-12 ದಿನಾಂಕ: 18-07-2011

## ಮಾಸಿಕ ಬಾಡಿಗೆ ಆಧಾರದಲ್ಲಿ ವಾಹನಗಳ ಸರಬರಾಜಿಗಾಗಿ ದರಪಟ್ಟಿ ಪ್ರಕಟಣೆ

ರಾಜ್ಯ ಕಛೇರಿಯ ಅಧಿಕಾರಿಗಳಿಗೆ ವಾಹನ ಸೌಕರ್ಯ ಒದಗಿಸುವ ಸಂಬಂಧ ಹೊರ ಗುತ್ತಿಗೆ ಆಧಾರದ ಮೇಲೆ ಮಾಸಿಕ ಬಾಡಿಗೆ ದರದಲ್ಲಿ ಅಗತ್ಯಕ್ಕೆ ತಕ್ಕಂತೆ ವಾಹನಗಳನ್ನು ಪಡೆಯುವ ಸಂಬಂಧ ಕಾರುಗಳನ್ನು ಹೊಂದಿರುವ ಅಧಿಕೃತ ಟ್ರಾವಲ್ಸ್‌ರವರುಗಳಿಂದ ದರಪಟ್ಟಿಗಳನ್ನು ಆಹ್ವಾನಿಸಲಾಗಿದೆ. ಆಸಕ್ತ ಟ್ರಾವಲ್ಸ್‌ರವರು ರಾಜ್ಯ ಯೋಜನಾ ನಿರ್ದೇಶಕರು, ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಾ ಅಭಿಯಾನ, ಬೆಂಗಳೂರು ಈ ಕಛೇರಿಯಿಂದ ಕಛೇರಿ ವೇಳೆಯಲ್ಲಿ ದರಪಟ್ಟಿ ಅರ್ಜಿ ನಮೂನೆ ಮತ್ತು ವಿವರಗಳನ್ನು ದಿನಾಂಕ **18.07.2011** ರಿಂದ **28.07.2011** ರ ಸಂಜೆ 4.00 ಗಂಟೆಯೊಳಗಾಗಿ ಪಡೆಯಬಹುದು. ಭರ್ತಿಮಾಡಿ ಮೊಹರು ಮಾಡಿದ ದರಪಟ್ಟಿ ಲಕೋಟೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ **30.07.2011** ಸಂಜೆ 3.00 ಗಂಟೆಯವರೆಗೆ. ಭದ್ರತಾ ಠೇವಣಿ (ಇ.ಎಂ.ಡಿ) ಹಣ ರೂ: 25,000/- ಹೆಚ್ಚಿನ ವಿವರಗಳನ್ನು ಕಛೇರಿಯ ಕೆಲಸದ ವೇಳೆಯಲ್ಲಿ ಖುದ್ದಾಗಿ ಪಡೆಯಬಹುದು. ದರಪಟ್ಟಿಯ ಅಂದಾಜು ಮೌಲ್ಯ. ರೂ. 12 ಲಕ್ಷಗಳು.

ನಿರ್ದೇಶಕರು
ಆರ್.ಎಂ.ಎಸ್.ಎ

## ರಾಜ್ಯ ಯೋಜನಾ ನಿರ್ದೇಶಕರ ಕಛೇರಿ, ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಾ ಅಭಿಯಾನ, ಹೊಸ ಸಾರ್ವಜನಿಕ ಕಛೇರಿಗಳ ಆವರಣ, ಕೆ.ಆರ್.ವೃತ್ತ, ನೃಪತುಂಗ ರಸ್ತೆ, ಬೆಂಗಳೂರು

ಸಂ: ರಾಮಾಶಿಅ/ವಾಹನ.ಟೆಂ.2011/19/11-12 ದಿನಾಂಕ: 18-07-2011

ರಾಜ್ಯ ಕಛೇರಿಯ ಅಧಿಕಾರಿಗಳಿಗೆ ವಾಹನ ಸೌಕರ್ಯ ಒದಗಿಸುವ ಸಂಬಂಧ ಹೊರ ಗುತ್ತಿಗೆ ಆಧಾರದ ಮೇಲೆ ಮಾಸಿಕ ಬಾಡಿಗೆ ದರದಲ್ಲಿ ಅಗತ್ಯಕ್ಕೆ ತಕ್ಕಂತೆ ವಾಹನಗಳನ್ನು ಪಡೆಯುವ ಸಲುವಾಗಿ ಆಹ್ವಾನಿಸಿದ ಕಾರುಗಳ ಸರಬರಾಜು ಸಂಬಂಧದ ದರಪಟ್ಟಿ ಸಲ್ಲಿಸುವ ಕುರಿತು ಅನುಸರಿಸಬೇಕಾದ ಕಾರ್ಯ ವಿಧಾನ :-

1. ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಾ ಅಭಿಯಾನ ನಿಗದಿಪಡಿಸಿರುವ ಅರ್ಜಿ ನಮೂನೆ-1 ಮತ್ತು 2 ರಲ್ಲಿಯೇ ದರಪಟ್ಟಿ ಸಲ್ಲಿಸತಕ್ಕದ್ದು. ಅರ್ಜಿ ನಮೂನೆಯನ್ನು ಕಛೇರಿ ಕೆಲಸದ ವೇಳೆಯಲ್ಲಿ ದಿನಾಂಕ: **18.07.2011** ರಿಂದ **28.07.2011** ರ ಸಂಜೆ 4.00 ಗಂಟೆಯವರೆಗೆ ಟೆಂಡರ್ ಅರ್ಜಿಗಳನ್ನು ಪಡೆಯಬಹುದು.
2. ದರಪಟ್ಟಿಯನ್ನು ಈ ಕೆಳಕಂಡಂತೆ ಎರಡು ಲಕೋಟೆಗಳಲ್ಲಿ ಸಲ್ಲಿಸತಕ್ಕದ್ದು.
3. ದರಪಟ್ಟಿಯನ್ನು ದಿನಾಂಕ: **30.07.2011** ಮಧ್ಯಾಹ್ನ 3.00 ಗಂಟೆಯ ಒಳಗಾಗಿ ಸಲ್ಲಿಸತಕ್ಕದ್ದು.

### ಲಕೋಟೆ- 1

### ದರಪಟ್ಟಿಯೊಂದಿಗೆ ಈ ಕೆಳಕಂಡ ಮಾಹಿತಿಗಳನ್ನು ದಾಖಲೆಗಳ ಸಹಿತ ಸಲ್ಲಿಸತಕ್ಕದ್ದು.

1. ಅರ್ಜಿ ನಮೂನೆ-1ರಲ್ಲಿ ಮಾಹಿತಿಗಳನ್ನು ಭರ್ತಿ ಮಾಡಿ ಸಂಸ್ಥೆಯ ಮಾಲೀಕರು ದೃಢೀಕರಿಸಿ ದಾಖಲೆಗಳೊಂದಿಗೆ ಸಲ್ಲಿಸತಕ್ಕದ್ದು.
2. ಸಂಸ್ಥೆಯನ್ನು ನೋಂದಾಯಿಸಿದ ದೃಢೀಕೃತ ಪ್ರತಿಯನ್ನು ಲಗತ್ತಿಸುವುದು.
3. ಭದ್ರತಾ ಠೇವಣಿ(ಇ.ಎಂ.ಡಿ.) ಟೆಂಡರ್‌ಗೆ ರೂ. 25,000=00 (ರೂ ಇಪ್ಪತ್ತೈದು ಸಾವಿರ ಮಾತ್ರ) ಗಳ ಬ್ಯಾಂಕ್ ಹುಂಡಿಯನ್ನು ಪಡೆದು ಲಗತ್ತಿಸಿರಬೇಕು.
4. ಸಂಸ್ಥೆಯ ಹಿಂದಿನ ಮೂರು ವರ್ಷದ ಆದಾಯ ತೆರಿಗೆ ಪಾವತಿ ಬಗ್ಗೆ ದೃಢೀಕರಣ ಪತ್ರಗಳು(2007-08, 2008-09 ಮತ್ತು 2009-10) ಲಗತ್ತಿಸಿರಬೇಕು. ವ್ಯಕ್ತಿಗತ ಆದಾಯ ತೆರಿಗೆ ಪಾವತಿ ದೃಢೀಕರಣ ಪತ್ರಗಳನ್ನು ಪರಿಗಣಿಸಲಾಗುವುದಿಲ್ಲ.
5. ಸಂಸ್ಥೆಯ ವಾರ್ಷಿಕ ವಹಿವಾಟಿನ ವಿವರದ ದೃಢೀಕರಣ ಪತ್ರಗಳು (2007-08, 2008-09 ಮತ್ತು 2009-10) ಲಗತ್ತಿಸಿರಬೇಕು. ವ್ಯಕ್ತಿಗತ ವಾರ್ಷಿಕ ವಹಿವಾಟಿನ ವಿವರಗಳ ದೃಢೀಕರಣ ಪತ್ರಗಳನ್ನು ಪರಿಗಣಿಸಲಾಗುವುದಿಲ್ಲ.
6. ಸಂಸ್ಥೆಯು ಕನಿಷ್ಟ 08 ವಾಹನಗಳಿಗೆ ಮಾಲೀಕರಾಗಿರುವುದಕ್ಕೆ ದೃಢೀಕರಣ ಪತ್ರಗಳನ್ನು ಸಲ್ಲಿಸುವುದು. ವಾಹನಗಳು ಸಂಸ್ಥೆಯ ಹೆಸರಿನಲ್ಲಿ ಟ್ಯಾಕ್ಸಿ ಎಂದು ನೋಂದಣಿಯಾಗಿರತಕ್ಕದ್ದು, ವ್ಯಕ್ತಿಯ ಹೆಸರಿನಲ್ಲಿ ನೋಂದಣಿಯಾದ ವಾಹನಗಳ ಪ್ರಮಾಣ ಪತ್ರಗಳನ್ನು ಪರಿಗಣಿಸಲಾಗುವುದಿಲ್ಲ.
7. ಈ ರೀತಿಯ ಕಾರ್ಯ ನಿರ್ವಹಿಸಿದ ಕುರಿತು ಹಿಂದಿನ ಸೇವೆಯ ಅನುಭವದ ಪ್ರಮಾಣ ಪತ್ರಗಳನ್ನು ಸಲ್ಲಿಸುವುದು.
8. ಮಾಸಿಕ ಬಾಡಿಗೆ ಆಧಾರದ ಮೇಲೆ ವಾಹನಗಳನ್ನು ಸರಬರಾಜು ಮಾಡುವ ಸಂಬಂಧ ಈ ಕಛೇರಿಯು ನಿಗದಿಪಡಿಸಿರುವ ನಿಬಂಧನೆಗಳಿಗೆ ಒಪ್ಪಿಕೊಂಡಿರುವ ಕುರಿತು ಈ ದರಪಟ್ಟಿ ಅರ್ಜಿಯೊಂದಿಗೆ ನೀಡಲಾಗಿರುವ ಕರಡು ಕರಾರು ಒಪ್ಪಂದಕ್ಕೆ ಸಂಸ್ಥೆಯ ಮಾಲೀಕರು ಸಹಿ ಮಾಡಿ, ಸಂಸ್ಥೆಯ ಮೊಹರು ನಮೂದಿಸಿ ಸಲ್ಲಿಸುವುದು.

ಮೇಲ್ಕಂಡ ಮಾಹಿತಿಗಳನ್ನು ಒಂದು ಲಕೋಟೆಯಲ್ಲಿಟ್ಟು ಮೊಹರು ಮಾಡಿ "**ಲಕೋಟೆ-1 - ಕಾರುಗಳನ್ನು ಸರಬರಾಜು ಮಾಡುವ ಸಂಬಂಧದ ತಾಂತ್ರಿಕ ಮಾಹಿತಿ ಪಟ್ಟಿ**" ಎಂದು ನಮೂದಿಸಿ ರಾಜ್ಯ ಯೋಜನಾ ನಿರ್ದೇಶಕರು, ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಾ ಅಭಿಯಾನ, ಹೊಸ ಸಾರ್ವಜನಿಕ ಕಛೇರಿಗಳ ಆವರಣ, ಕೆ.ಆರ್.ವೃತ್ತ, ನೃಪತುಂಗ ರಸ್ತೆ, ಬೆಂಗಳೂರು ಇವರ ವಿಳಾಸಕ್ಕೆ ದಿನಾಂಕ: **30.07.2011** ರಂದು ಸಂಜೆ 3.00 ಗಂಟೆಯೊಳಗೆ ಖುದ್ದಾಗಿ ಸಲ್ಲಿಸುವುದು.

## ಲಕೋಟೆ–2

1. ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಾ ಅಭಿಯಾನವು ಒದಗಿಸಿರುವ ನಿಗಧಿತ ನಮೂನೆ–2 ರಲ್ಲಿ ಸಂಸ್ಥೆಯವರು ವಾಹನಗಳ ಸರಬರಾಜು ಸಂಬಂಧದ ತಮ್ಮ ದರವನ್ನು ಸೂಚಿಸಿ ಮಾಲೀಕರ ಸಹಿ ಹೆಸರು ಹಾಗೂ ಸಂಸ್ಥೆಯ ಹೆಸರು ಮತ್ತು ವಿಳಾಸದ ಮೊಹರನ್ನು ಹಾಕಿ ಸೀಲ್ ಮಾಡಿ ಒಂದು ಲಕೋಟೆಯಲ್ಲಿರಿಸಿ ಮೊಹರು ಮಾಡಿ ಸಲ್ಲಿಸುವುದು. ಲಕೋಟೆ ಮೇಲ್ಭಾಗದಲ್ಲಿ **"ಲಕೋಟೆ–2 ಕಾರುಗಳನ್ನು ಸರಬರಾಜು ಮಾಡುವ ಸಂಬಂಧದ ದರಪಟ್ಟಿ"** ಎಂದು ನಮೂದಿಸುವುದು.

2. ಮೊಹರು ಮಾಡಲಾದ ಎರಡು ಲಕೋಟೆಗಳನ್ನು ರಾಜ್ಯ ಯೋಜನಾ ನಿರ್ದೇಶಕರು, ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಾ ಅಭಿಯಾನ, ಹೊಸ ಸಾರ್ವಜನಿಕ ಕಛೇರಿಗಳ ಆವರಣ, ಕೆ.ಆರ್.ವೃತ್ತ, ನೃಪತುಂಗ ರಸ್ತೆ, ಬೆಂಗಳೂರು ಇವರ ವಿಳಾಸಕ್ಕೆ ದಿನಾಂಕ: **30.07.2011** ರಂದು ಸಂಜೆ **3.00** ಗಂಟೆಯೊಳಗೆ ಖುದ್ದಾಗಿ ಸಲ್ಲಿಸುವುದು.

ನಿರ್ದೇಶಕರು
ಆರ್.ಎಂ.ಎಸ್.ಎ

ನಮೂನೆ–1

ಕಾರುಗಳನ್ನು ಮಾಸಿಕ ಬಾಡಿಗೆ ಆಧಾರದ ಮೇಲೆ ಸರಬರಾಜು ಮಾಡುವ ಸಂಬಂಧ ಸಂಸ್ಥೆಯ ಮಾಹಿತಿ ನಮೂನೆ

| | | |
|---|---|---|
| 01 | ಸಂಸ್ಥೆಯ ಹೆಸರು:– | |
| 02 | ಸಂಸ್ಥೆಯ ನೋಂದಣಿ ಸಂಖ್ಯೆ ಮತ್ತು ವರ್ಷ:– (ನೋಂದಣಿ ಪತ್ರದ ದೃಢೀಕೃತ ನಕಲು ಪ್ರತಿ ಲಗತ್ತಿಸುವುದು) | |
| 03 | ಸಂಸ್ಥೆಯ ಆದಾಯ ತೆರಿಗೆ ಪಾವತಿ ವಿವರ:– (ಸಂಸ್ಥೆಯ ಕಳೆದ 3 ವರ್ಷಗಳ (2007–08, 2008–09 ಮತ್ತು 2009–10) ಆದಾಯ ತೆರಿಗೆ ಇಲಾಖೆಯಿಂದ ನೀಡಿರುವ ಧೃಢೀಕರಣ ಪತ್ರಗಳ ಛಾಯಾ ಪ್ರತಿ ಲಗತ್ತಿಸುವುದು (ವ್ಯಕ್ತಿಯ ಹೆಸರಿನಲ್ಲಿ ಸಲ್ಲಿಸಲಾದ ಆದಾಯ ತೆರಿಗೆ ವಿವರಗಳನ್ನು ಪರಿಗಣಿಸಲಾಗುವುದಿಲ್ಲ) | |
| 04 | ಸಂಸ್ಥೆಯ ವಾರ್ಷಿಕ ವಹಿವಾಟು(ರೂ.ಲಕ್ಷಗಳಲ್ಲಿ) ಸಂಸ್ಥೆಯ ಲೆಕ್ಕಪರಿಶೋಧನೆ ನಡೆಸಿರುವ ಕಳೆದ ಮೂರು ವರ್ಷಗಳ (2007–08, 2008–09 ಮತ್ತು 2009–10) ಲೆಕ್ಕಪತ್ರಗಳ ತಃಖ್ತೆಯ ದೃಢೀಕೃತ ಪ್ರತಿಯನ್ನು ಸಲ್ಲಿಸುವುದು. (ವ್ಯಕ್ತಿಗತ ವಾರ್ಷಿಕ ವಹಿವಾಟಿನ ವಿವರಗಳನ್ನು ಪರಿಗಣಿಸುವುದಿಲ್ಲ) | |
| 05 | ಹಿಂದಿನ ಸೇವೆಯ ಅನುಭವ:– (ಈರೀತಿ ಕೆಲಸಮಾಡಿದ ಹಿಂದಿನ ಅನುಭವದ ಪ್ರಮಾಣಪತ್ರಗಳನ್ನು ಸಲ್ಲಿಸುವುದು) | |
| 06 | ಕನಿಷ್ಟ 8 ವಾಹನಗಳಿಗೆ ಮಾಲೀಕರಾಗಿರುವುದಕ್ಕೆ ಸಂಸ್ಥೆಯ ಹೆಸರಿನಲ್ಲಿ ಟ್ಯಾಕ್ಸಿ ಎಂದು ನೋಂದಣಿ ಆಗಿರುವ ವಾಹನ ನೋಂದಣಿ ಪ್ರಮಾಣ ಪತ್ರದ ಛಾಯಾ ಪ್ರತಿ ಲಗತ್ತಿಸುವುದು. | |
| 07 | ಭದ್ರತಾ ಠೇವಣಿ(ಇ.ಎಂ.ಡಿ.) ಹಣದ ವಿವರ: ಬ್ಯಾಂಕ್ ಹುಂಡಿ ಸಂಖ್ಯೆ ಮತ್ತು ದಿನಾಂಕ | |
| 08 | ಕರಡು ಕರಾರು ಒಪ್ಪಂದಕ್ಕೆ ಸಹಿ ಮಾಡಿ ಸಲ್ಲಿಸಲಾಗಿದೆಯೆ? | ಹೌದು / ಇಲ್ಲ |

ಸಂಸ್ಥೆಯ ಮೊಹರಿನೊಂದಿಗೆ
ಸಂಸ್ಥೆಯ ಮುಖ್ಯಸ್ಥರ ಸಹಿ

ನಮೂನೆ–2

ಕಾರುಗಳನ್ನು ಮಾಸಿಕ ಬಾಡಿಗೆ ಆಧಾರದ ಮೇಲೆ ಸರಬರಾಜು ಮಾಡುವ ಸಂಬಂಧ ದರಪಟ್ಟಿ ನಮೂನೆ

| ಕ್ರಮ ಸಂ. | ವಾಹನಗಳ ವಿವರ | | ಎಲ್ಲಾ ತೆರಿಗೆ ಸೇರಿ ಪ್ರತಿ ಕಿ.ಮೀ.ಗೆ ಕನಿಷ್ಠ ದರ. | ಚಾಲಕರ ಬಾಟಾ | | ವಾಹನಗಳ ಸ್ಥಿತಿ ಮತ್ತು ವಾಹನಗಳ ತಯಾರಿಕಾ ವರ್ಷ |
|---|---|---|---|---|---|---|
| | | | | ಹಗಲು | ರಾತ್ರಿ | |
| **ಮಾಸಿಕ ಬಾಡಿಗೆ ಆಧಾರದ ವಾಹನಗಳ ಹೊರತಾಗಿ ಹೆಚ್ಚುವರಿ ವಾಹನಗಳನ್ನು ಪಡೆದು ಬೆಂಗಳೂರಿನಿಂದ ಹೊರ ಪ್ರದೇಶಗಳಿಗೆ ಪ್ರಯಾಣಕ್ಕಾಗಿ** | | | | | | |
| 1 | ಟಾಟಾ ಇಂಡಿಕಾ | ಎ.ಸಿ. | | | | |
| | | ನಾನ್ ಎ.ಸಿ | | | | |
| 2 | ಟಾಟಾ ಇಂಡೊಗೋ | ಎ.ಸಿ | | | | |
| | | ನಾನ್ ಎಸಿ | | | | |
| 3 | ಇನ್ನೋವ | ಎ.ಸಿ. | | | | |
| | | ನಾನ್ ಎ.ಸಿ | | | | |

**ಮಾಸಿಕ ಬಾಡಿಗೆ ಆಧಾರದ ಮೇಲೆ ಬೆಂಗಳೂರು ನಗರದಲ್ಲಿ ಹಾಗೂ ಬೆಂಗಳೂರಿನಿಂದ ಹೊರಗಿನ ಪ್ರಯಾಣ ಸೇರಿದಂತೆ ಎಲ್ಲಾ ತೆರಿಗೆ ಸೇರಿದ ಕನಿಷ್ಠ ಮಾಸಿಕ ದರ ರೂ. ಗಳಲ್ಲಿ**

**(ಸ್ಥಳೀಯ ಪ್ರಯಾಣ ಅಂದರೆ ಬೆಂಗಳೂರು ನಗರ ಪ್ರದೇಶದಲ್ಲಿನ ಪ್ರಯಾಣಕ್ಕೆ ಚಾಲಕರ ದೈನಿಕ ಬಾಟಾ ನೀಡಲಾಗುವುದಿಲ್ಲ)**

| | ಮಾಸಿಕ ದರ | ಕ್ರಮಿಸಬಹುದಾದ ಒಟ್ಟಾರೆ ಮಾಸಿಕ ಕಿ.ಮೀ. | ಹೆಚ್ಚುವರಿ ಕಿ.ಮೀ.ಗೆ ಪ್ರತಿ ಕಿ.ಮೀಗೆ ದರ | ಒಂದು ದಿನದ ಅವಧಿ | ಹೆಚ್ಚುವರಿ ಅವಧಿಗೆ ಪ್ರತಿ ಅವಧಿಗೆ ದರ | ಬೆಂ.ನಿಂದ ಹೊರ ಪ್ರಯಾಣಕ್ಕೆ ಚಾಲಕರ ಬಾಟಾ | |
|---|---|---|---|---|---|---|---|
| | | | | | | ಹಗಲು | ರಾತ್ರಿ |
| ಟಾಟಾ ಇಂಡಿಕಾ | | | | | | | |
| ಟಾಟಾ ಇಂಡಿಗೋ | | | | | | | |
| ಇನ್ನೋವಾ | | | | | | | |

ಟಿಪ್ಪಣಿ:–

1. ಮೇಲೆ ಸೂಚಿಸಲಾದ ವಾಹನಗಳ ಹೆಸರು ಕೇವಲ ಸಾಂಕೇತಿಕವಾಗಿದ್ದು, ಅದೇ ವಾಹನ ಅಥವಾ ಸಮಾನಾಂತರ ವಾಹನಗಳು ಎಂದು ಭಾವಿಸತಕ್ಕದ್ದು.
2. ರಾತ್ರಿ 10 ಘಂಟೆಯ ನಂತರ ವಾಹನ ಚಾಲಕರು ವಾಹನ ಚಲಾಯಿಸಿದಲ್ಲಿ ಮಾತ್ರ ರಾತ್ರಿ ಬಾಟ ಅನ್ವಯಿಸುವುದು.

ಸಂಸ್ಥೆಯ ಮುಖ್ಯಸ್ಥರ ಸಹಿ
ಮತ್ತು ಹೆಸರು ಮೊಹರಿನೊಂದಿಗೆ

**ರಾಜ್ಯ ಯೋಜನಾ ನಿರ್ದೇಶಕರ ಕಛೇರಿ, ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಾ ಅಭಿಯಾನ,**
**ಹೊಸ ಸಾರ್ವಜನಿಕ ಕಛೇರಿಗಳ ಆವರಣ, ಕೆ.ಆರ್.ವೃತ್ತ, ನೃಪತುಂಗ ರಸ್ತೆ, ಬೆಂಗಳೂರು**

ಸಂ ರಾಮಾಶಿಅ/ವಾಹನ.ಟೆಂ.2011/19/11-12 ದಿನಾಂಕ: 15-07-2011

ರಾಜ್ಯ ಕಛೇರಿಯ ಅಧಿಕಾರಿಗಳಿಗೆ ವಾಹನ ಸೌಕರ್ಯ ಒದಗಿಸುವ ಸಂಬಂಧ ಹೊರ ಗುತ್ತಿಗೆ ಆಧಾರದ ಮೇಲೆ ಮಾಸಿಕ ಬಾಡಿಗೆ ದರದಲ್ಲಿ ಅಗತ್ಯಕ್ಕೆ ತಕ್ಕಂತೆ ವಾಹನಗಳನ್ನು ಪಡೆಯುವ ಸಲುವಾಗಿ ಆಹ್ವಾನಿಸಿದ ಕಾರುಗಳ ಸರಬರಾಜು ಸಂಬಂಧದ ದರಪಟ್ಟಿ ಕುರಿತು ಪಾಲಿಸಬೇಕಾದ ನಿಬಂಧನೆಗಳು/ಷರತ್ತುಗಳು :-

## ದರಪಟ್ಟಿ ನಿಬಂಧನೆಗಳು

1. ದರಪಟ್ಟಿಯನ್ನು ನಿಗಧಿತ ನಮೂನೆಯಲ್ಲಿಯೇ ಸಲ್ಲಿಸತಕ್ಕದ್ದು. ಝೆರಾಕ್ಸ್ ಮಾಡಿದ ನಮೂನೆಗಳಲ್ಲಿ ಸಲ್ಲಿಸಲಾಗುವ ದರಪಟ್ಟಿಗಳನ್ನು ತಿರಸ್ಕರಿಸಲಾಗುವುದು.
2. ಸಂಸ್ಥೆಯವರು ದರಪಟ್ಟಿಯೊಂದಿಗೆ ರೂ. 25,000/-(ರೂ ಇಪ್ಪತ್ತೈದು ಸಾವಿರ ಮಾತ್ರ) ಭದ್ರತಾ ಠೇವಣಿಯನ್ನು ನಿರ್ದೇಶಕರು, ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಾ ಅಭಿಯಾನ, ಬೆಂಗಳೂರು ಇವರ ಹೆಸರಿಗೆ ಪಡೆದ ಬ್ಯಾಂಕ್ ಹುಂಡಿಯನ್ನು ಸಲ್ಲಿಸತಕ್ಕದ್ದು. ಈ ಭದ್ರತಾ ಠೇವಣಿಗೆ ಯಾವುದೇ ರೀತಿಯ ಬಡ್ಡಿಯನ್ನು ಪಾವತಿಸಲಾಗುವುದಿಲ್ಲ. ಈ ಭದ್ರತಾ ಠೇವಣಿಯನ್ನು ದರಪಟ್ಟಿ ಅವಧಿ ಮುಗಿದ ನಂತರ ದರಪಟ್ಟಿ ನಿಬಂಧನೆಗಳನ್ನು ಕ್ರಮವಾಗಿ ಪಾಲಿಸಲಾಗಿದ್ದಲ್ಲಿ ಮಾತ್ರ ಬಡ್ಡಿ ರಹಿತವಾಗಿ ಹಿಂತಿರುಗಿಸಲಾಗುವುದು.
3. ಭದ್ರತಾ ಠೇವಣಿ ನೀಡದೆ ಸಲ್ಲಿಸಲಾಗುವ ದರಪಟ್ಟಿಗಳನ್ನು ತಿರಸ್ಕರಿಸಲಾಗುವುದು.
4. ಅಂಗೀಕೃತ ಟ್ರಾವಲ್ಸ್ ಸಂಸ್ಥೆಯವರು ರೂ 200=00ರ ಛಾಪಾ ಕಾಗದದಲ್ಲಿ ಈ ದರಪಟ್ಟಿಯೊಂದಿಗೆ ನೀಡಲಾಗಿರುವ ಕರಡು ನಮೂನೆಯಂತೆ ಕರಾರು ಪತ್ರವನ್ನು ಬರೆದುಕೊಡಬೇಕು.
5. ಸಂಸ್ಥೆಯವರು ತಮ್ಮದೇ ಆದ ಕನಿಷ್ಟ 8 ವಾಹನಗಳನ್ನಾದರೂ ಹೊಂದಿರಬೇಕು. ಈ ವಾಹನಗಳು ಸಂಸ್ಥೆಯ ಹೆಸರಿನಲ್ಲಿ ಟ್ಯಾಕ್ಸಿ ಎಂದು ನೋಂದಣಿ ಆಗಿರಬೇಕು.
6. ರಾ.ಮಾ.ಶಿ. ಅಭಿಯಾನಕ್ಕೆ ಮಾಸಿಕ ಕನಿಷ್ಠ ಐದು ವಾಹನಗಳ ಅಗತ್ಯವಿದ್ದು, ಇದು ಕೇವಲ ಸೂಚಿತ ಸಂಖ್ಯೆಯಾಗಿದ್ದು ಅವಶ್ಯಕತೆ ಅನುಸಾರ ಅಗತ್ಯ ವಾಹನಗಳ ಸಂಖ್ಯೆಗಳು ಬದಲಾವಣೆಗೆ ಒಳಪಟ್ಟಿರುತ್ತದೆ.
7. ರಾ.ಮಾ.ಶಿ.ಅಭಿಯಾನವು ಕೋರಿದ ಕೂಡಲೆ ಅಗತ್ಯವಿರುವಷ್ಟು ವಾಹನಗಳನ್ನು ಒದಗಿಸಲು ಸಂಸ್ಥೆಯವರು ಸಮರ್ಥರಾಗಿರಬೇಕು. ಒಂದು ವೇಳೆ ಯಾವುದೇ ಕಾರಣಕ್ಕೂ ಸಂಸ್ಥೆಯವರು ನಿಗದಿತ ಅವಧಿಯೊಳಗೆ ಕೋರಲಾದ ವಾಹನವನ್ನು ಒದಗಿಸಲು ವಿಫಲವಾದಲ್ಲಿ ರಾ.ಮಾ.ಶಿ.ಅಭಿಯಾನವು ಮಾಡಿಕೊಳ್ಳುವ ಪ್ರತ್ಯೇಕ ವ್ಯವಸ್ಥೆಯಿಂದ ರಾ.ಮಾ.ಶಿ.ಅಭಿಯಾನಕ್ಕೆ ಉಂಟಾಗುವ ನಷ್ಟವನ್ನು ರಾ.ಮಾ.ಶಿ.ಅಭಿಯಾನವು ನಿಗಧಿಪಡಿಸುವ ದಂಡದೊಂದಿಗೆ ಪಾವತಿಸಲು ಬದ್ಧರಾಗಿರತಕ್ಕದ್ದು. ಇಲ್ಲವಾದಲ್ಲಿ ಸದರಿ ಮೊತ್ತವನ್ನು ಮುಂದೆ ಪಾವತಿಸಲಾಗುವ ಬಿಲ್‌ನಲ್ಲಿ ಅಥವಾ ಭದ್ರತಾ ಠೇವಣಿಯಲ್ಲಿ ಕಟಾಯಿಸಲಾಗುವುದು.
8. ಸಮಯಕ್ಕೆ ಸರಿಯಾಗಿ ವಾಹನ ಒದಗಿಸಲು ವಿಫಲವಾದ ಪಕ್ಷದಲ್ಲಿ ಅಥವಾ ವಾಹನವು ಮಾರ್ಗಮಧ್ಯದಲ್ಲಿ ಯಂತ್ರದೋಷದಿಂದ ನಿಂತುಹೋದಲ್ಲಿ ಅಥವಾ ವಾಹನ ಚಾಲಕರ ನಿರ್ಲಕ್ಷ್ಯದಿಂದ ಅಪಘಾತ ಸಂಭವಿಸಿ ಆದ ಅಡಚಣೆಯಿಂದ ಆಗುವ ನಷ್ಟಕ್ಕೆ ರಾ.ಮಾ.ಶಿ.ಅಭಿಯಾನವು ನಿಗಧಿಪಡಿಸುವ ದಂಡವನ್ನು ನಷ್ಟದ ಮೊತ್ತದೊಂದಿಗೆ ಭರಿಸುವುದಾಗಿ ಒಪ್ಪಿಕೊಳ್ಳಬೇಕು. ಹಾಗೂ ರಾ.ಮಾ.ಶಿ.ಅಭಿಯಾನವು ಮಾಡಿಕೊಳ್ಳುವ ಪ್ರತ್ಯೇಕ ವ್ಯವಸ್ಥೆಯಿಂದ ಉಂಟಾಗುವ ನಷ್ಟವನ್ನು ಸಹ ಸಂಸ್ಥೆಯವರೆ ಭರಿಸತಕ್ಕದ್ದು.
9. ವಾಹನಗಳು ಸುಸ್ಥಿತಿಯಲ್ಲಿರಬೇಕು. ಹಾಗೂ ಅಂತರ್ ರಾಜ್ಯ ಪರವಾನಿಗೆ ಪಡೆದಿರಬೇಕು. ಹಾಗೂ ವಿಮಾ ಪಾಲಿಸಿ, ವಾಯು ಮಾಲೀನ್ಯ ದೃಢತೆ ಪ್ರಮಾಣ ಪತ್ರ ಮತ್ತು ರಸ್ತೆ ಪರವಾನಿಗೆಯು ಚಾಲ್ತಿಯಲ್ಲಿರಬೇಕು.
10. ವಾಹನಗಳಿಗೆ ಸಂಬಂಧಿಸಿದ ಚಾಲಕರುಗಳು ವಾಹನ ಚಾಲನೆಯ ಪರವಾನಗಿ ಹಾಗೂ ಟ್ಯಾಕ್ಸಿ ಚಾಲನೆಯ ಬ್ಯಾಡ್ಜ್(ಪರವಾನಗಿ) ಹೊಂದಿರಬೇಕು. ಮತ್ತು ಪೂರ್ಣ ಅನುಭವ ಹೊಂದಿರಬೇಕು. ಅಲ್ಲದೆ ರಾ.ಮಾ.ಶಿ.ಅಭಿಯಾನದ

ಅಧಿಕಾರಿ ಮತ್ತು ಸಿಬ್ಬಂದಿಯೊಡನೆ ಅತ್ಯಂತ ಜವಾಬ್ದಾರಿಯುತವಾಗಿ ಸೌಜನ್ಯ ಶಿಸ್ತು ಮತ್ತು ಸಂಯಮದಿಂದ ವರ್ತಿಸಿ ಸಹಕರಿಸುವಂತೆ ನಡೆದುಕೊಳ್ಳಬೇಕು.

11. ರಾ.ಮಾ.ಶಿ.ಅಭಿಯಾನಕ್ಕೆ ವಾಹನಗಳನ್ನು ಒದಗಿಸುವ/ಒದಗಿಸಿದ ಸಂದರ್ಭದಲ್ಲಿ ಚಾಲಕರ ಮುಷ್ಕರದಿಂದ ಅಥವಾ ಯಾವುದೇ ರೀತಿಯಿಂದ ರಾ.ಮಾ.ಶಿ.ಅಭಿಯಾನಕ್ಕೆ ತೊಂದರೆಯಾದಲ್ಲಿ ಇದರಿಂದ ಉಂಟಾಗುವ ಆರ್ಥಿಕ ನಷ್ಟಕ್ಕೆ ಮಾಲೀಕರೇ ಸಂಪೂರ್ಣ ಜವಾಬ್ದಾರರಾಗಿರುತ್ತಾರೆ. ಹಾಗೂ ಸದರಿ ನಷ್ಟವನ್ನು ಮಾಲೀಕರೇ ಭರಿಸತಕ್ಕದ್ದು.
12. ಈ ದರಪಟ್ಟಿಯಲ್ಲಿ ಒಪ್ಪಿಕೊಂಡ ದರಗಳು ಕರಾರು ಒಪ್ಪಂದ ಮಾಡಿಕೊಂಡ ದಿನಾಂಕದಿಂದ ಒಂದು ವರ್ಷದ ಅವಧಿವರೆಗೆ ಜಾರಿಯಲ್ಲಿರುತ್ತದೆ. ಹಾಗೂ ಸಂಸ್ಥೆಯವರ ಸೇವೆ ತೃಪ್ತಿಕರವಾಗಿದ್ದು, ಇದೇ ದರದಲ್ಲಿ ಮತ್ತೊಂದು ವರ್ಷಕ್ಕೆ ಕರಾರನ್ನು ವಿಸ್ತರಿಸುವ ಅಥವಾ ವಿಸ್ತರಿಸದೇ ಇರುವ ತೀರ್ಮಾನವನ್ನು ರಾಜ್ಯ ಯೋಜನಾ ನಿರ್ದೇಶಕರಲ್ಲಿ ಕಾಯ್ದಿರಿಸಿದೆ. ಈ ವಿಷಯದಲ್ಲಿ ರಾಜ್ಯ ಯೋಜನಾ ನಿರ್ದೇಶಕರ ತೀರ್ಮಾನವೇ ಅಂತಿಮವಾಗಿರುತ್ತದೆ.
13. ವಾಹನವು ಅನಗತ್ಯವಾಗಿ ಬಳಸು ಮಾರ್ಗದಲ್ಲಿ ಪ್ರಯಾಣಿಸಿ, ಹೆಚ್ಚುವರಿ ಕಿ.ಮೀ. ಕ್ರಮಿಸಿದ್ದು ಕಂಡುಬಂದಲ್ಲಿ, ಸದರಿ ಹೆಚ್ಚುವರಿ ಕಿ.ಮೀ.ಗಳನ್ನು ಬಿಲ್ಲಿನಲ್ಲಿ ಕಟಾಯಿಸಲಾಗುವುದು.
14. ಯಾವುದೇ ವಾಹನಗಳಿಗೆ ಮುಂಗಡ ಹಣ ನೀಡಲಾಗುವುದಿಲ್ಲ. ಮತ್ತು ಸಂಸ್ಥೆಯವರು ರಾ.ಮಾ.ಶಿ.ಅಭಿಯಾನವು ಸೂಚಿಸಿದ ಸಮಯಕ್ಕೆ ಸರಿಯಾಗಿ ವಾಹನ ಒದಗಿಸಬೇಕು. ಹಾಗೂ ಯಂತ್ರದೋಷವಿಲ್ಲದ ಮತ್ತು ಸಮರ್ಪಕವಾಗಿ ಕಾರ್ಯನಿರ್ವಹಿಸುವ ವಾಹನಗಳನ್ನು ಒದಗಿಸಬೇಕು.
15. ಸಂಸ್ಥೆಯವರು ಒದಗಿಸುವ ವಾಹನಗಳು 2005ರ ನಂತರದ ವಾಹನಗಳಾಗಿರಬೇಕು, ಹಾಗೂ ಎಲ್ಲಾ ವಾಹನಗಳೂ ಸಹ ಟ್ಯಾಕ್ಸಿ ಎಂದು ಕಡ್ಡಾಯವಾಗಿ ನೋಂದಣಿ ಆಗಿರಬೇಕು. ಮಾಸಿಕ ಬಾಡಿಗೆ ಆಧಾರದ ಮೇಲೆ ನೀಡಲಾಗುವ ವಾಹನಗಳ ನೋಂದಣಿ ಪತ್ರದ ಪ್ರತಿಗಳನ್ನು ರಾ.ಮಾ.ಶಿ.ಅಭಿಯಾನ ಕಛೇರಿಗೆ ಕಡ್ಡಾಯವಾಗಿ ಸಲ್ಲಿಸುವುದು. ಹಾಗೂ ಸಾಧ್ಯವಾದಷ್ಟು ಮಟ್ಟಿಗೆ ಅದೇ ವಾಹನವನ್ನು ವರ್ಷ ಪೂರ್ತಿ ಮುಂದುವರೆಸುವುದು.
16. ಮಾಸಿಕ ಬಾಡಿಗೆ ಆಧಾರದ ಮೇಲೆ ನೀಡಲಾಗುವ ವಾಹನಗಳ ಕಿ.ಮೀ.ಗಳನ್ನು ಈ ಕಛೇರಿಯಿಂದ ಈ ಕಛೇರಿಗೆ ಮಾತ್ರ ನೀಡಲಾಗುವುದು. ಪ್ರತಿ ದಿನ ಸಂಸ್ಥೆಯವರ ಕಛೇರಿಗೆ ಮತ್ತು ವಾಪಸ್ಸು ಎಂದು ಡೆಡ್ ಮೈಲೇಜ್ ಅನ್ನು ನೀಡಲಾಗುವುದಿಲ್ಲ. ತಿಂಗಳಿಗೆ ಕನಿಷ್ಠ 2500 ಕಿ.ಮೀ.ವರೆಗೆ ದರ ನಮೂದಿಸುವುದು.
17. ಮಾಸಿಕ ಬಾಡಿಗೆ ಆಧಾರದ ಮೇಲೆ ನೀಡಲಾಗುವ ವಾಹನಗಳು ಒಂದು ದಿನದ ಅವಧಿ ಎಂದರೆ 12 ಘಂಟೆಗಳು, ಬೆಳಿಗ್ಗೆ 8:30 ರಿಂದ ರಾತ್ರಿ 8:30 ಆಗಿರುತ್ತದೆ. ಈ ಅವಧಿಗಿಂತ ಹೆಚ್ಚಿನ ಘಂಟೆಗಳ ಅವಧಿಗೆ ವಾಹನ ಉಪಯೋಗಿಸಿದಲ್ಲಿ ಮಾತ್ರ ಹೆಚ್ಚುವರಿ ಅವಧಿಗೆ ಬಾಡಿಗೆ ಪಾವತಿಸಲಾಗುವುದು. – ಈ ಕುರಿತು ವಾಹನ ಉಪಯೋಗಿಸುವ ಅಧಿಯಕಾರಿಯು ಸ್ಪಷ್ಟ ಕಾರಣವನ್ನು ಟ್ರಿಪ್ ಶೀಟ್‌ನಲ್ಲಿ ನಮೂದಿಸಿರಬೇಕು.
18. ಮಾಸಿಕ ಬಾಡಿಗೆ ಆಧಾರದ ಮೇಲೆ ನೀಡಲಾಗುವ ವಾಹನಗಳಿಗೆ ಈ ಕಛೇರಿಯಿಂದ ನೀಡಲಾದ ಟ್ರಿಪ್ ಶೀಟ್ ನಮೂನೆಯಲ್ಲಿಯೇ ಸಂಬಂಧಿಸಿದ ವಾಹನ ಉಪಯೋಗಿಸಿದ ಅಧಿಕಾರಿಯ ಸಹಿಯನ್ನು ಪ್ರತಿ ದಿನ ಪಡೆದು ಮಾಸಿಕ ಬಿಲ್ಲಿನೊಂದಿಗೆ ಸಲ್ಲಿಸುವುದು ಕಡ್ಡಾಯವಾಗಿರುತ್ತದೆ.
19. ಮಾಸಿಕ ಬಾಡಿಗೆ ಆಧಾರದ ಮೇಲೆ ನೀಡಲಾಗುವು ವಾಹನಗಳು ಕರಾರು ಒಪ್ಪಂದದ ಅವಧಿಯಲ್ಲಿ ಯಾವುದೇ ದಿನ ಗೈರುಹಾಜರು ಆಗುವಂತಿಲ್ಲ. ಒಂದು ವೇಳೆ ಯಾವುದೇ ಕಾರಣಕ್ಕಾಗಿ ದಿನ ನಿತ್ಯದ ವಾಹನವು ಅಲಭ್ಯವಾದಾಗ ಟೆಂಡರುದಾರರು ಬದಲಿ ವ್ಯವಸ್ಥೆಯನ್ನು ಕಡ್ಡಾಯವಾಗಿ ಮಾಡತಕ್ಕದ್ದು, ಇಲ್ಲದಿದ್ದಲ್ಲಿ ಅಂಥಹ ದಿನಕ್ಕೆ ದಿನದ ಸರಾಸರಿಯಂತೆ ಮಾಸಿಕ ಬಿಲ್ಲಿನಲ್ಲಿ ಕಟಾಯಿಸಲಾಗುವುದು, ಹಾಗೂ ಮೇಲೆ ನಿಬಂಧನೆ ಸಂಖ್ಯೆ: 7ರಲ್ಲಿ ಸೂಚಿಸಿರುವಂತೆ ಕ್ರಮ ಕೈಗೊಳ್ಳಲಾಗುವುದು.
20. ಮಾಸಿಕ ಬಾಡಿಗೆ ಆಧಾರದ ಮೇಲೆ ನೀಡಲಾಗುವ ವಾಹನಗಳು ಕಛೇರಿಗೆ ಅಗತ್ಯವಿದ್ದಲ್ಲಿ ರಜಾ ದಿನಗಳಲ್ಲೂ ಕಾರ್ಯ ನಿರ್ವಹಿಸುವುದು ಕಡ್ಡಾಯವಾಗಿರುತ್ತದೆ. ಹಾಗೂ ಮಾಸಿಕ ಬಾಡಿಗೆ ಎಂದರೆ ಇಂಗ್ಲೀಷ್ ಕ್ಯಾಲೆಂಡರ್ ಮಾಸಿಕದ ದಿನಗಳು ಎಂದು ಭಾವಿಸುವುದು.
21. ರಜಾ ದಿನಗಳಲ್ಲಿ ವಾಹನ ಉಪಯೋಗಿಸಿದ ಸಂದರ್ಭದಲ್ಲಿ ಟ್ರಿಪ್ ಶೀಟ್‌ನಲ್ಲಿ ವಾಹನ ಉಪಯೋಗಿಸಿದ ಅಧಿಕಾರಿಯವರು ಸ್ಪಷ್ಟ ಕಾರಣವನ್ನು ನಮೂದಿಸಿರಬೇಕು ಹಾಗೂ ಅದಕ್ಕೆ (ಟ್ರಿಪ್ ಶೀಟ್‌ನಲ್ಲಿ) ಮಾನ್ಯ ನಿರ್ದೇಶಕರು(ರಾ.ಮಾ.ಶಿ.ಅ) ರವರ ಅನುಮೋದನೆ ಪಡೆದಿರಬೇಕು
22. ಮಾಸಿಕ ಬಾಡಿಗೆ ಆಧಾರದ ಮೇಲೆ ಕಾರ್ಯ ನಿರ್ವಹಿಸುವ ವಾಹನಗಳ ಚಾಲಕರುಗಳು ಅಧಿಕಾರಿಗಳು ಸೂಚಿಸುವಂತೆ ಕಾರ್ಯ ನಿರ್ವಹಿಸಲು ವಾಹನ ಚಾಲಕರುಗಳಿಗೆ ಸ್ಪಷ್ಟವಾಗಿ ತಿಳಿಸುವುದು. ಹಾಗೂ ಕಛೇರಿ ಅವಧಿಯಲ್ಲಿ ಕಛೇರಿ ಕಾರ್ಯ ನಿಮಿತ್ತ ಯಾವುದೇ ಪ್ರದೇಶಕ್ಕೆ ಹೋಗಲು ತಿಳಿಸಿದರೂ ಸಹ ಹೊರಡಲು ಸಿದ್ದರಿರುವಂತೆ ವಾಹನ ಚಾಲಕರುಗಳಿಗೆ ಸ್ಪಷ್ಟವಾಗಿ ತಿಳಿಸುವುದು. ಒಂದು ವೇಳೆ ಅಧಿಕಾರಿಗಳ ನಿರ್ದೇಶನವನ್ನು ತಿರಸ್ಕರಿಸಿದಲ್ಲಿ ಅಂಥಹ ವಾಹನ ಚಾಲಕರ

ವಾಹನವು ಆ ದಿನದಂದು ಕಾರ್ಯ ನಿರ್ವಹಿಸಿರುವುದಿಲ್ಲ ಎಂದು ಪರಿಗಣಿಸಿ ಮೇಲಿನ ನಿಬಂಧನೆಗಳಲ್ಲಿ ತಿಳಿಸಿರುವಂತೆ ಕ್ರಮ ಜರುಗಿಸಲಾಗುವುದು.

23. ದರಪಟ್ಟಿಯಲ್ಲಿನ ನಿಬಂಧನೆ ಉಲ್ಲಂಘಿಸಿದಲ್ಲಿ ಏಕಪಕ್ಷೀಯವಾಗಿ ನೀಡಿರುವ ಆದೇಶವನ್ನು ರದ್ದುಗೊಳಿಸಲಾಗುವುದು. ಮತ್ತು ಭದ್ರತಾ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
24. ಯಾವುದೇ ಕಾರಣಗಳನ್ನು ನೀಡದೆ ದರಪಟ್ಟಿಗಳನ್ನು ಸ್ವೀಕರಿಸುವ, ತಿರಸ್ಕರಿಸುವ, ಮಾರ್ಪಡಿಸುವ, ರದ್ದುಪಡಿಸುವ ಅಥವಾ ಮರು ದರಪಟ್ಟಿ ಕರೆಯುವ ಅಧಿಕಾರವನ್ನು ರಾಜ್ಯ ಯೋಜನಾ ನಿರ್ದೇಶಕರು ಹೊಂದಿರುತ್ತಾರೆ.
25. ವಾಹನ ಯಾವುದೇ ಕಾರಣಗಳಿಂದ ಪೋಲೀಸ್ ಇತ್ಯಾದಿ ಪ್ರಕರಣಗಳಿಗೆ ಒಳಗಾದಲ್ಲಿ ಸಂಸ್ಥೆಯವರೇ ಸ್ವತಃ ಇತ್ಯರ್ಥ ಪಡಿಸಕೊಳ್ಳತಕ್ಕದ್ದು. ರಾ.ಮಾ.ಶಿ.ಅಭಿಯಾನವು ಯಾವುದೇ ರೀತಿಯ ಜವಾಬ್ದಾರಿ ತೆಗೆದುಕೊಳ್ಳುವುದಿಲ್ಲ.
26. ಈ ಸಂಬಂಧದಲ್ಲಿ ಉದ್ಭವಿಸಬಹುದಾದ ತೊಂದರೆ ಅಡಚಣೆಗಳನ್ನು ಬೆಂಗಳೂರು ನಗರದ ವ್ಯಾಪ್ತಿಗೆ ಬರುವ ನ್ಯಾಯಾಲಯದಲ್ಲಿ ಸಂಸ್ಥೆಯವರ ಸ್ವಂತ ಖರ್ಚಿನಲ್ಲಿ ಬಗೆಹರಿಸಿಕೊಳ್ಳತಕ್ಕದ್ದು.
27. ಈ ದರಪಟ್ಟಿಗೆ ಸಂಬಂಧಿಸಿದ ಎಲ್ಲಾ ವಿಷಯಗಳಲ್ಲಿ ಯಾವುದೇ ನಿರ್ಧಾರವನ್ನು ಕೈಗೊಳ್ಳುವ ಹಕ್ಕನ್ನು ರಾಜ್ಯ ಯೋಜನಾ ನಿರ್ದೇಶಕರಲ್ಲಿ ಕಾಯ್ದಿರಿಸಲಾಗಿದೆ.

ರಾಜ್ಯ ಯೋಜನಾ ನಿರ್ದೇಶಕರು

# ಕರಡು ಕರಾರು ಒಪ್ಪಂದ ಪತ್ರ

ಸನ್ ಎರಡು ಸಾವಿರದ ಹನ್ನೊಂದನೇ ಇಸವಿ ಮಾಹೆಯ ದಿನದಂದು ( – –2007) ರಾಜ್ಯ ಯೋಜನಾ ನಿರ್ದೇಶಕರು, ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಾ ಅಭಿಯಾನ, ಹೊಸ ಸಾರ್ವಜನಿಕ ಕಛೇರಿಗಳ ಆವರಣ, ಕೆ.ಆರ್.ವೃತ್ತ, ನೃಪತುಂಗ ರಸ್ತೆ, ಬೆಂಗಳೂರು–560 001 ಇವರು ಮೊದಲನೇ ಪಾರ್ಟಿ, ಹಾಗೂ ಶ್ರೀ . ಮಾಲೀಕರು ಮೆ: ಬೆಂಗಳೂರು–560 0 ಇವರು ಎರಡನೇ ಪಾರ್ಟಿ ಇವರುಗಳ ನಡುವೆ ಏರ್ಪಟ್ಟ ಒಪ್ಪಂದದ ಕರಾರು ಏನೆಂದರೆ:–

1. 2011–12ನೇ ಸಾಲಿನಲ್ಲಿ ರಾಜ್ಯ ಯೋಜನಾ ಕಛೇರಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗಳಿಗೆ ವಾಹನ ಸೌಲಭ್ಯ ಒದಗಿಸುವ ಸಂಬಂಧ ಹೊರ ಗುತ್ತಿಗೆ ಆಧಾರದ ಮೇಲೆ ಮಾಸಿಕ ಬಾಡಿಗೆ ದರದಲ್ಲಿ ಅಗತ್ಯಕ್ಕೆ ತಕ್ಕಂತೆ ವಾಹನಗಳನ್ನು ಪಡೆಯುವ ಸಲುವಾಗಿ ಮೊದಲನೇ ಪಾರ್ಟಿ ಮತ್ತು ಎರಡನೇ ಪಾರ್ಟಿ ನಡುವೆ ಕರಾರು ಒಪ್ಪಂದ ಏರ್ಪಟ್ಟಿರುತ್ತದೆ. ಈ ಕರಾರು ಪತ್ರಕ್ಕೆ ಈರ್ವರೂ ಸಹ ಬದ್ಧರಾಗಿರುತ್ತೇವೆಂದು ಈ ಕೆಳಗೆ ಸಹಿ ಮಾಡುವ ಮೂಲಕ ದೃಢೀಕರಿಸಿರುತ್ತೇವೆ.
2. ಮೊದಲನೇ ಪಾರ್ಟಿಯು ಸೂಚಿಸುವ ಸಂಖ್ಯೆಗಳಿಗೆ ಅನುಗುಣವಾಗಿ ಮಾಸಿಕ ಬಾಡಿಗೆ ಆಧಾರದ ಮೇಲೆ ವಾಹನಗಳನ್ನು ಸರಬರಾಜು ಮಾಡಲು ಎರಡನೇ ಪಾರ್ಟಿಯು ಒಪ್ಪಿಕೊಂಡಿರುತ್ತಾರೆ. ಹಾಗೂ ಸಂದರ್ಭಾನುಸಾರ ಅಗತ್ಯಕ್ಕೆ ಅನುಗುಣವಾಗಿ ಹೆಚ್ಚುವರಿ ವಾಹನಗಳ ಬೇಡಿಕೆ ಸಲ್ಲಿಸಿದ ಸಮಯದಲ್ಲಿ ನಿಗದಿತ ಸಮಯಕ್ಕೆ ವಾಹನಗಳನ್ನು ಒದಗಿಸಲು ಸಹ ಎರಡನೇ ಪಾರ್ಟಿಯು ಒಪ್ಪಿಕೊಂಡಿರುತ್ತಾರೆ.
3. ಮೊದಲನೇ ಪಾರ್ಟಿಯು ಕೋರಿದ ಕೂಡಲೆ ಅಗತ್ಯವಿರುವಷ್ಟು ವಾಹನಗಳನ್ನು ಒದಗಿಸಲು ಎರಡನೇ ಪಾರ್ಟಿಯು ಒಪ್ಪಿದ್ದು, ಒಂದು ವೇಳೆ ಯಾವುದೇ ಕಾರಣಕ್ಕೂ ಎರಡನೇ ಪಾರ್ಟಿಯು ನಿಗಧಿತ ಅವಧಿಯೊಳಗೆ ಕೋರಲಾದ ವಾಹನವನ್ನು ಒದಗಿಸಲು ವಿಫಲವಾದಲ್ಲಿ ಮೊದಲನೇ ಪಾರ್ಟಿಯು ಮಾಡಿಕೊಳ್ಳುವ ಪ್ರತ್ಯೇಕ ವ್ಯವಸ್ಥೆಯಿಂದ ಮೊದಲನೇ ಪಾರ್ಟಿಗೆ ಉಂಟಾಗುವ ನಷ್ಟವನ್ನು ಮೊದಲನೇ ಪಾರ್ಟಿ ನಿಗಧಿಪಡಿಸುವ ದಂಡದೊಂದಿಗೆ ಪಾವತಿಸಲು ಒಪ್ಪಿರುತ್ತಾರೆ.
4. ಎರಡನೇ ಪಾರ್ಟಿಯು ಮೊದಲನೇ ಪಾರ್ಟಿಗೆ ಈ ಕೆಳಕಂಡ ದರದಲ್ಲಿ ವಾಹನಗಳನ್ನು ಸರಬರಾಜು ಮಾಡಲು ಒಪ್ಪಿಕೊಂಡಿರುತ್ತಾರೆ.

| ಕ್ರಮ ಸಂ. | ವಾಹನಗಳ ವಿವರ | | ಎಲ್ಲಾ ತೆರಿಗೆ ಸೇರಿ ಪ್ರತಿ ಕಿ.ಮೀ.ಗೆ ಕನಿಷ್ಠ ದರ. | ಚಾಲಕರ ಬಾಟಾ | | ವಾಹನಗಳ ಸ್ಥಿತಿ ಮತ್ತು ವಾಹನಗಳ ತಯಾರಿಕಾ ವರ್ಷ |
|---|---|---|---|---|---|---|
| | | | | ಹಗಲು | ರಾತ್ರಿ | |
| **ಮಾಸಿಕ ಬಾಡಿಗೆ ಆಧಾರದ ವಾಹನಗಳ ಹೊರತಾಗಿ ಹೆಚ್ಚುವರಿ ವಾಹನಗಳನ್ನು ಪಡೆದು ಬೆಂಗಳೂರಿನಿಂದ ಹೊರ ಪ್ರದೇಶಗಳಿಗೆ ಪ್ರಯಾಣಕ್ಕಾಗಿ** | | | | | | |
| 1 | ಟಾಟಾ ಇಂಡಿಕಾ | ಎ.ಸಿ. | | | | |
| | | ನಾನ್ ಎ.ಸಿ | | | | |
| 2 | ಟಾಟಾ ಇಂಡೊಗೋ | ಎ.ಸಿ | | | | |
| | | ನಾನ್ ಎಸಿ | | | | |
| 3 | ಇನ್ನೋವ | ಎ.ಸಿ. | | | | |
| | | ನಾನ್ ಎ.ಸಿ | | | | |

**ಮಾಸಿಕ ಬಾಡಿಗೆ ಆಧಾರದ ಮೇಲೆ ಬೆಂಗಳೂರು ನಗರದಲ್ಲಿ ಹಾಗೂ ಬೆಂಗಳೂರಿನಿಂದ ಹೊರಗಿನ ಪ್ರಯಾಣ ಸೇರಿದಂತೆ ಎಲ್ಲಾ ತೆರಿಗೆ ಸೇರಿದ ಕನಿಷ್ಠ ಮಾಸಿಕ ದರ ರೂ. ಗಳಲ್ಲಿ**
**(ಸ್ಥಳೀಯ ಪ್ರಯಾಣ ಅಂದರೆ ಬೆಂಗಳೂರು ನಗರ ಪ್ರದೇಶದಲ್ಲಿನ ಪ್ರಯಾಣಕ್ಕೆ ಚಾಲಕರ ದೈನಿಕ ಬಾಟಾ ನೀಡಲಾಗುವುದಿಲ್ಲ)**

| | ಮಾಸಿಕ ದರ | ಕ್ರಮಿಸಬಹುದಾದ ಒಟ್ಟಾರೆ ಮಾಸಿಕ ಕಿ.ಮೀ. | ಹೆಚ್ಚುವರಿ ಕಿ.ಮೀ.ಗೆ ಪ್ರತಿ ಕಿ.ಮೀಗೆ ದರ | ಒಂದು ದಿನದ ಅವಧಿ | ಹೆಚ್ಚುವರಿ ಅವಧಿಗೆ ಪ್ರತಿ ಅವಧಿಗೆ ದರ | ಬೆಂ.ನಿಂದ ಹೊರ ಪ್ರಯಾಣಕ್ಕೆ ಚಾಲಕರ ಬಾಟಾ | |
|---|---|---|---|---|---|---|---|
| | | | | | | ಹಗಲು | ರಾತ್ರಿ |
| ಟಾಟಾ ಇಂಡಿಕಾ | | | | | | | |
| ಟಾಟಾ ಇಂಡಿಗೋ | | | | | | | |
| ಇನ್ನೋವಾ | | | | | | | |

5. ಎರಡನೇ ಪಾರ್ಟಿಯು ಸಮಯಕ್ಕೆ ಸರಿಯಾಗಿ ವಾಹನ ಒದಗಿಸಲು ವಿಫಲವಾದ ಪಕ್ಷದಲ್ಲಿ ಅಥವಾ ವಾಹನವು ಮಾರ್ಗಮಧ್ಯದಲ್ಲಿ ಯಂತ್ರದೋಷದಿಂದ ನಿಂತುಹೋದಲ್ಲಿ ಅಥವಾ ವಾಹನ ಚಾಲಕರ ನಿರ್ಲಕ್ಷ್ಯದಿಂದ ಅಪಘಾತ ಸಂಭವಿಸಿ ಆದ ಅಡಚಣೆಯಿಂದ ಆಗುವ ನಷ್ಟಕ್ಕೆ ಮೊದಲನೇ ಪಾರ್ಟಿಯು ನಿಗಧಿಪಡಿಸುವ ದಂಡವನ್ನು ನಷ್ಟದ ಮೊತ್ತದೊಂದಿಗೆ ಭರಿಸುವುದಾಗಿ ಎರಡನೇ ಪಾರ್ಟಿಯು ಒಪ್ಪಿರುತ್ತಾರೆ.
6. ಎರಡನೇ ಪಾರ್ಟಿಯು ಅಂತರ್ ರಾಜ್ಯ ಪರವಾನಿಗೆ ಪಡೆದ, ವಿಮಾ ಪಾಲಿಸಿ, ವಾಯು ಮಾಲೀನ್ಯ ದೃಢತೆ ಪ್ರಮಾಣ ಪತ್ರ ಮತ್ತು ರಸ್ತೆ ಪರವಾನಿಗೆಯು ಚಾಲ್ತಿಯಲ್ಲಿರುವಂಥಹ ಹಾಗು ಇನ್ನಿತರೆ ದಾಖಲೆಗಳು ಲಭ್ಯವಿರುವ ಸುಸ್ಥಿತಿಯಲ್ಲಿರುವ ವಾಹನಗಳನ್ನು ಸರಬರಾಜು ಮಾಡಲು ಒಪ್ಪಿರುತ್ತಾರೆ.
7. ವಾಹನ ಚಾಲನೆಯ ಪರವಾನಗಿ ಹಾಗೂ ಟ್ಯಾಕ್ಸಿ ಚಾಲನೆಯ ಬ್ಯಾಡ್ಜ್(ಪರವಾನಗಿ) ಹೊಂದಿರುವಂಥಹ ಮತ್ತು ಪೂರ್ಣ ಅನುಭವ ಹೊಂದಿರುವ ಚಾಲಕರುಗಳನ್ನೇ ಒದಗಿಸಲು ಹಾಗೂ ವಾಹನ ಚಾಲಕರುಗಳಿಗೆ ರಾ.ಮಾ.ಶಿ.ಅಭಿಯಾನದ ಅಧಿಕಾರಿ ಮತ್ತು ಸಿಬ್ಬಂದಿಯೊಡನೆ ಅತ್ಯಂತ ಜವಾಬ್ದಾರಿಯುತವಾಗಿ ಸೌಜನ್ಯ ಶಿಸ್ತು ಮತ್ತು ಸಂಯಮದಿಂದ ವರ್ತಿಸಿ ಸಹಕರಿಸುವಂತೆ ನಿರ್ದೇಶನ ನೀಡಲು ಎರಡನೇ ಪಾರ್ಟಿಯು ಒಪ್ಪಿರುತ್ತಾರೆ.

8. ಮೊದಲನೇ ಪಾರ್ಟಿಗೆ ವಾಹನಗಳನ್ನು ಒದಗಿಸುವ/ಒದಗಿಸಿದ ಸಂದರ್ಭದಲ್ಲಿ ಚಾಲಕರ ಮುಷ್ಕರದಿಂದ ಅಥವಾ ಯಾವುದೇ ರೀತಿಯಿಂದ ಮೊದಲನೇ ಪಾರ್ಟಿಗೆ ತೊಂದರೆಯಾದಲ್ಲಿ ಇದರಿಂದ ಉಂಟಾಗುವ ಆರ್ಥಿಕ ನಷ್ಟಕ್ಕೆ ಎರಡನೇ ಪಾರ್ಟಿಯೇ ಜವಾಬ್ದಾರರಾಗಲು ಹಾಗೂ ಸದರಿ ನಷ್ಟವನ್ನು ಭರಿಸಲು ಎರಡನೇ ಪಾರ್ಟಿಯು ಒಪ್ಪಿರುತ್ತಾರೆ.
9. ಈ ದರಪಟ್ಟಿಯಲ್ಲಿ ಒಪ್ಪಿಕೊಂಡ ದರಗಳು ಕರಾರು ಒಪ್ಪಂದ ಮಾಡಿಕೊಂಡ ದಿನಾಂಕದಿಂದ ಒಂದು ವರ್ಷದ ಅವಧಿವರೆಗೆ ಜಾರಿಯಲ್ಲಿರುತ್ತದೆ. ಹಾಗೂ ಸಂಸ್ಥೆಯವರ ಸೇವೆ ತೃಪ್ತಿಕರವಾಗಿದ್ದು, ಇದೇ ದರದಲ್ಲಿ ಮತ್ತೊಂದು ವರ್ಷಕ್ಕೆ ಕರಾರನ್ನು ವಿಸ್ತರಿಸುವ ಅಥವಾ ವಿಸ್ತರಿಸದೇ ಇರುವ ತೀರ್ಮಾನವನ್ನು ಮೊದಲನೇ ಪಾರ್ಟಿಯಲ್ಲಿ ಕಾಯ್ದಿರಿಸಿದೆ. ಈ ವಿಷಯದಲ್ಲಿ ಮೊದಲನೇ ಪಾರ್ಟಿಯ ತೀರ್ಮಾನವೇ ಅಂತಿಮವಾಗಿರುತ್ತದೆ.
10. ವಾಹನವು ಅನಗತ್ಯವಾಗಿ ಬಳಸು ಮಾರ್ಗದಲ್ಲಿ ಪ್ರಯಾಣಿಸಿ, ಹೆಚ್ಚುವರಿ ಕಿ.ಮೀ. ಕ್ರಮಿಸಿದ್ದು ಕಂಡುಬಂದಲ್ಲಿ, ಸದರಿ ಹೆಚ್ಚುವರಿ ಕಿ.ಮೀ.ಗಳನ್ನು ಬಿಲ್ಲಿನಲ್ಲಿ ಕಟಾಯಿಸಲು ಎರಡನೇ ಪಾರ್ಟಿಯು ಒಪ್ಪಿರುತ್ತಾರೆ.
11. ಮೊದಲನೇ ಪಾರ್ಟಿಯು ಎರಡನೇ ಪಾರ್ಟಿ ಒದಗಿಸುವ ಯಾವುದೇ ವಾಹನಗಳಿಗೆ ಮುಂಗಡ ಹಣ ನೀಡಲಾಗುವುದಿಲ್ಲ. ಮತ್ತು ಎರಡನೇ ಪಾರ್ಟಿಯು ಮೊದಲನೇ ಪಾರ್ಟಿ ಸೂಚಿಸಿದ ಸಮಯಕ್ಕೆ ಸರಿಯಾಗಿ ವಾಹನ ಒದಗಿಸಲು ಹಾಗೂ ಯಂತ್ರದೋಷವಿಲ್ಲದ ಮತ್ತು ಸಮರ್ಪಕವಾಗಿ ಕಾರ್ಯನಿರ್ವಹಿಸುವ ವಾಹನಗಳನ್ನು ಒದಗಿಸಲು ಎರಡನೇ ಪಾರ್ಟಿಯು ಒಪ್ಪಿರುತ್ತಾರೆ.
12. ಎರಡನೇ ಪಾರ್ಟಿಯು 2005ರ ನಂತರದ ಹಾಗೂ ಟ್ಯಾಕ್ಸಿ ಎಂದು ನೋಂದಣಿಯಾದ ವಾಹನಗಳನ್ನು ಮಾತ್ರ ಬಾಡಿಗೆ ಆಧಾರದ ಮೇಲೆ ಒದಗಿಸಲು ಹಾಗೂ ಸಾಧ್ಯವಾದಷ್ಟು ಮಟ್ಟಿಗೆ ಅದೇ ವಾಹನವನ್ನು ವರ್ಷ ಪೂರ್ತಿ ಮುಂದುವರೆಸಲು ಒಪ್ಪಿರುತ್ತಾರೆ.
13. ಎರಡನೇ ಪಾರ್ಟಿಯು ಮಾಸಿಕ ಬಾಡಿಗೆ ಆಧಾರದ ಮೇಲೆ ಒದಗಿಸುವ ವಾಹನಗಳ ಕಿ.ಮೀ.ಗಳನ್ನು ಮೊದಲನೇ ಪಾರ್ಟಿಯ ಕಛೇರಿಯಿಂದ ಮೊದಲನೇ ಪಾರ್ಟಿಯ ಕಛೇರಿಗೆ ಮಾತ್ರ ನೀಡಲಾಗುವುದು. ಪ್ರತಿ ದಿನ ಎರಡನೇ ಪಾರ್ಟಿಯವರ ಕಛೇರಿಗೆ ಮತ್ತು ವಾಪಸ್ಸು ಎಂದು ಡೆಡ್ ಮೈಲೇಜ್ ಅನ್ನು ನೀಡಲಾಗುವುದಿಲ್ಲ ಎಂಬ ಷರತ್ತಿಗೆ ಎರಡನೇ ಪಾರ್ಟಿಯವರು ಒಪ್ಪಿರುತ್ತಾರೆ.
14. ಎರಡನೇ ಪಾರ್ಟಿಯು ಮಾಸಿಕ ಬಾಡಿಗೆ ಆಧಾರದ ಮೇಲೆ ನೀಡಲಾಗುವ ವಾಹನಗಳು ಒಂದು ದಿನದ ಅವಧಿ ಎಂದರೆ 12 ಘಂಟೆಗಳು, ಬೆಳಿಗ್ಗೆ 8:30 ರಿಂದ ರಾತ್ರಿ 8:30 ಆಗಿರುತ್ತದೆ. ಈ ಅವಧಿಗಿಂತ ಹೆಚ್ಚಿನ ಘಂಟೆಗಳ ಅವಧಿಗೆ ವಾಹನ ಉಪಯೋಗಿಸಿದಲ್ಲಿ ಮಾತ್ರ ಹೆಚ್ಚುವರಿ ಅವಧಿಗೆ ಬಾಡಿಗೆ ಪಾವತಿಸಲಾಗುವುದು. – ಈ ಕುರಿತು ವಾಹನ ಉಪಯೋಗಿಸುವ ಅಧಿಯಕಾರಿಯು ಸ್ಪಷ್ಟ ಕಾರಣವನ್ನು ಟ್ರಿಪ್ ಶೀಟ್‌ನಲ್ಲಿ ನಮೂದಿಸಿರಬೇಕು – ಎಂಬ ಷರತ್ತಿಗೆ ಎರಡನೇ ಪಾರ್ಟಿಯು ಒಪ್ಪಿರುತ್ತಾರೆ.
15. ಎರಡನೇ ಪಾರ್ಟಿಯು ಮಾಸಿಕ ಬಾಡಿಗೆ ಆಧಾರದ ಮೇಲೆ ನೀಡಲಾಗುವ ವಾಹನಗಳಿಗೆ ಈ ಕಛೇರಿಯಿಂದ ನೀಡಲಾದ ಟ್ರಿಪ್ ಶೀಟ್ ನಮೂನೆಯಲ್ಲಿಯೇ ಸಂಬಂಧಿಸಿದ ವಾಹನ ಉಪಯೋಗಿಸಿದ ಅಧಿಕಾರಿಯ ಸಹಿಯನ್ನು ಪ್ರತಿ ದಿನ ಪಡೆದು ಮಾಸಿಕ ಬಿಲ್ಲಿನೊಂದಿಗೆ ಸಲ್ಲಿಸಲು ಎರಡನೇ ಪಾರ್ಟಿಯು ಒಪ್ಪಿರುತ್ತಾರೆ.
16. ಎರಡನೇ ಪಾರ್ಟಿಯು ಮಾಸಿಕ ಬಾಡಿಗೆ ಆಧಾರದ ಮೇಲೆ ನೀಡಲಾಗುವು ವಾಹನಗಳು ಕರಾರು ಒಪ್ಪಂದದ ಅವಧಿಯಲ್ಲಿ ಯಾವುದೇ ದಿನ ಗೈರುಹಾಜರು ಆಗದೇ ಇರುವಂತೆ, ಒಂದು ವೇಳೆ ಯಾವುದೇ ಕಾರಣಕ್ಕಾಗಿ ದಿನ ನಿತ್ಯದ ವಾಹನವು ಅಲಭ್ಯವಾದಾಗ ಎರಡನೇ ಪಾರ್ಟಿಯು ಬದಲಿ ವ್ಯವಸ್ಥೆಯನ್ನು ಮಾಡಲು ಎರಡನೇ ಪಾರ್ಟಿಯು ಒಪ್ಪಿರುತ್ತಾರೆ. ಇದಕೆ ತಪ್ಪಿದಲ್ಲಿ ಅಂಥಹ ದಿನಕ್ಕೆ ದಿನದ ಸರಾಸರಿಯಂತೆ ಮಾಸಿಕ ಬಿಲ್ಲಿನಲ್ಲಿ ಕಟಾಯಿಸಲು, ಹಾಗೂ ಮೇಲೆ ನಿಬಂಧನೆ ಸಂಖ್ಯೆ: 7ರಲ್ಲಿ ಸೂಚಿಸಿರುವಂತೆ ಮೊದಲನೇ ಪಾರ್ಟಿಯು ಕ್ರಮ ಕೈಗೊಳ್ಳಲು ಎರಡನೇ ಪಾರ್ಟಿಯು ಒಪ್ಪಿರುತ್ತಾರೆ.
17. ಎರಡನೇ ಪಾರ್ಟಿಯು ಮಾಸಿಕ ಬಾಡಿಗೆ ಆಧಾರದ ಮೇಲೆ ನೀಡಲಾಗುವ ವಾಹನಗಳು ಕಛೇರಿಗೆ ಅಗತ್ಯವಿದ್ದಲ್ಲಿ ರಜಾ ದಿನಗಳಲ್ಲೂ ಕಾರ್ಯ ನಿರ್ವಹಿಸಲು ಎರಡನೇ ಪಾರ್ಟಿಯು ಒಪ್ಪಿರುತ್ತಾರೆ. – ಮಾಸಿಕ ಬಾಡಿಗೆ ಎಂದರೆ ಇಂಗ್ಲೀಷ್ ಕ್ಯಾಲೆಂಡರ್ ಮಾಸಿಕದ ದಿನಗಳು ಎಂದು ಭಾವಿಸುವುದು.
18. ರಜಾ ದಿನಗಳಲ್ಲಿ ವಾಹನ ಉಪಯೋಗಿಸಿದ ಸಂದರ್ಭದಲ್ಲಿ ಟ್ರಿಪ್ ಶೀಟ್‌ನಲ್ಲಿ ವಾಹನ ಉಪಯೋಗಿಸಿದ ಅಧಿಕಾರಿಯವರು ಸ್ಪಷ್ಟ ಕಾರಣವನ್ನು ನಮೂದಿಸುವಂತೆ ಹಾಗೂ ಅದಕ್ಕೆ (ಟ್ರಿಪ್ ಶೀಟ್‌ನಲ್ಲಿ) ಮಾನ್ಯ ನಿರ್ದೇಶಕರು(ರಾ.ಮಾ.ಶಿ.ಅ) ರವರ ಅನುಮೋದನೆ ಪಡೆಯುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಮೊದಲನೇ ಪಾರ್ಟಿಯು ಸೂಚಿಸಲು ಒಪ್ಪಿರುತ್ತಾರೆ.
19. ಎರಡನೇ ಪಾರ್ಟಿಯು ಮಾಸಿಕ ಬಾಡಿಗೆ ಆಧಾರದ ಮೇಲೆ ಕಾರ್ಯ ನಿರ್ವಹಿಸುವ ವಾಹನಗಳ ಚಾಲಕರುಗಳು ಅಧಿಕಾರಿಗಳು ಸೂಚಿಸುವಂತೆ ಕಾರ್ಯ ನಿರ್ವಹಿಸಲು ವಾಹನ ಚಾಲಕರುಗಳಿಗೆ ಸ್ಪಷ್ಟವಾಗಿ ಸೂಚಿಸಲು, ಹಾಗೂ ಕಛೇರಿ ಅವಧಿಯಲ್ಲಿ ಕಛೇರಿ ಕಾರ್ಯ ನಿಮಿತ್ತ ಯಾವುದೇ ಪ್ರದೇಶಕ್ಕೆ ಹೋಗಲು ತಿಳಿಸಿದರೂ ಸಹ ಹೊರಡಲು ಸಿದ್ದರಿರುವಂತೆ

ವಾಹನ ಚಾಲಕರುಗಳಿಗೆ ಸ್ಪಷ್ಟವಾಗಿ ತಿಳಿಸಲು, ಒಂದು ವೇಳೆ ಅಧಿಕಾರಿಗಳ ನಿರ್ದೇಶನವನ್ನು ತಿರಸ್ಕರಿಸಿದಲ್ಲಿ ಅಂಥಹ ವಾಹನ ಚಾಲಕರ ವಾಹನವು ಆ ದಿನದಂದು ಕಾರ್ಯ ನಿರ್ವಹಿಸಿರುವುದಿಲ್ಲ ಎಂದು ಪರಿಗಣಿಸಿ ಮೇಲಿನ ನಿಬಂಧನೆಗಳಲ್ಲಿ ತಿಳಿಸಿರುವಂತೆ ಮೊದಲನೇ ಪಾರ್ಟಿಯು ಕ್ರಮ ಜರುಗಿಸಲು ಎರಡನೇ ಪಾರ್ಟಿಯು ಒಪ್ಪಿರುತ್ತಾರೆ.

20. ಎರಡನೇ ಪಾರ್ಟಿಯು ದರಪಟ್ಟಿಯಲ್ಲಿನ ನಿಬಂಧನೆ ಉಲ್ಲಂಘಿಸಿದಲ್ಲಿ ಮೊದಲನೇ ಪಾರ್ಟಿಯು ಏಕಪಕ್ಷೀಯವಾಗಿ ಈ ಕರಾರನ್ನು ರದ್ದುಗೊಳಿಸಿ ಭದ್ರತಾ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಳ್ಳಲು ಎರಡನೇ ಪಾರ್ಟಿಯ ಒಪ್ಪಿರುತ್ತಾರೆ.
21. ಎರಡನೇ ಪಾರ್ಟಿಯು ಒದಗಿಸಿದ ವಾಹನಗಳು ಯಾವುದೇ ಕಾರಣಗಳಿಂದ ಪೋಲೀಸ್ ಇತ್ಯಾದಿ ಪ್ರಕರಣಗಳಿಗೆ ಒಳಗಾದಲ್ಲಿ ಸಂಸ್ಥೆಯವರೇ ಸ್ವತಃ ಇತ್ಯರ್ಥ ಪಡಿಸಕೊಳ್ಳಲು ಎರಡನೇ ಪಾರ್ಟಿಯು ಒಪ್ಪಿರುತ್ತಾರೆ.
22. ಈ ಕರಾರು ಒಪ್ಪಂದದ ಸಂಬಂಧದಲ್ಲಿ ಉದ್ಭವಿಸಬಹುದಾದ ತೊಂದರೆ ಅಡಚಣೆಗಳನ್ನು ಬೆಂಗಳೂರು ನಗರ ವ್ಯಾಪ್ತಿಯ ನ್ಯಾಯಾಲಯದಲ್ಲಿ ಸ್ವಂತ ಖರ್ಚಿನಲ್ಲಿ ಬಗೆಹರಿಸಿಕೊಳ್ಳಲು ಎರಡನೇ ಪಾರ್ಟಿಯು ಒಪ್ಪಿರುತ್ತಾರೆ.
23. ಈ ದರಪಟ್ಟಿಗೆ ಸಂಬಂಧಿಸಿದ ಎಲ್ಲಾ ವಿಷಯಗಳಲ್ಲಿ ಯಾವುದೇ ನಿರ್ಧಾರವನ್ನು ಕೈಗೊಳ್ಳುವ ಹಕ್ಕನ್ನು ಮೊದಲನೇ ಪಾರ್ಟಿಯಲ್ಲಿ ಕಾಯ್ದಿರಿಸಲಾಗಿದೆ.

ಮೊದಲನೇ ಪಾರ್ಟಿ
ರಾಜ್ಯ ಯೋಜನಾ ನಿರ್ದೇಶಕರು

ಎರಡನೇ ಪಾರ್ಟಿ